**ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ**
**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಜೆ.ಸಂ.ಮುಂ/2010-11 ದಿನಾಂಕ: 03-04-2010

## ಸುತ್ತೋಲೆ

**ವಿಷಯ:** ಜಿಲ್ಲಾ ಮತ್ತು ತಾಲ್ಲೂಕು ಜೆಂಡರ್ ಸಂಯೋಜಕರನ್ನು ಮುಂದುವರೆಸುವ ಬಗ್ಗೆ.

**ಉಲ್ಲೇಖ:** 1. ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ರಾಯಚೂರು ಇವರ ಪತ್ರ ಸಂಖ್ಯೆ: ಎ3/ಸ.ಶಿ.ಅ/ಜಿ.ತಾ.ಜೆ.ಸಂ/ಮುಂ.ಬಗ್ಗೆ/2009-10. ದಿನಾಂಕ: 04-03-2010.

2. ಈ ಕಛೇರಿ ಸುತ್ತೋಲೆ ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಸಮಾ.ನೇಮಕ/2006-07. ದಿನಾಂಕ: 11-05-2006.

******

ಮೇಲಿನ ವಿಷಯದನ್ವಯ, ಜಿಲ್ಲಾ ಹಾಗೂ ತಾಲ್ಲೂಕು ಜೆಂಡರ್ ಸಂಯೋಜಕರ ಅವಧಿ ಮಾರ್ಚ್ 2010 ರವರೆಗೆ ಇದ್ದು, ಅವರ ಸೇವೆಯನ್ನು 2010-11 ನೇ ಸಾಲಿನಲ್ಲಿ ಮುಂದುವರೆಸುವ ಬಗ್ಗೆ ಉಲ್ಲೇಖಿತ ಪತ್ರದಲ್ಲಿ ಮಾರ್ಗದರ್ಶನ ಕೋರಲಾಗಿದೆ.

ಜಿಲ್ಲೆ ಹಾಗೂ ತಾಲ್ಲೂಕು ಜೆಂಡರ್ ಸಂಯೋಜಕರ ಮುಂದುವರಿಕೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳಂತೆ ಕ್ರಮ ಕೈಗೊಳ್ಳಲು ಎಲ್ಲ ಜಿಲ್ಲೆಗಳಿಗೆ ಸೂಚಿಸಿದೆ.

- ಈಗ ಸೇವೆ ಸಲ್ಲಿಸುತ್ತಿರುವ ಜಿಲ್ಲಾ ಮತ್ತು ತಾಲ್ಲೂಕು ಜೆಂಡರ್ ಸಂಯೋಜಕರ ಸೇವೆಯು ತೃಪ್ತಿಕರವಾಗಿದ್ದಲ್ಲಿ, 2010-11 ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನದ ಜಿಲ್ಲಾ ವಾರ್ಷಿಕ ಕಾರ್ಯಯೋಜನೆಯಲ್ಲಿ ಈ ಚಟುವಟಿಕೆಗೆ ಸಂಬಂಧಿಸಿದ ಅನುಮೋದನೆಯ ಷರತ್ತಿಗೊಳಪಟ್ಟು 2011 ರ ಮಾರ್ಚ್‌ವರೆಗೆ ಮುಂದುವರೆಸಬಹುದು.
- ಈಗ ಸೇವೆ ಸಲ್ಲಿಸುತ್ತಿರುವ ಜಿಲ್ಲಾ ಮತ್ತು ತಾಲ್ಲೂಕು ಜೆಂಡರ್ ಸಂಯೋಜಕರ ಸೇವೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಅವರ ಸ್ಥಾನದಲ್ಲಿ ಇತರೆ ಸಮರ್ಥರನ್ನು ಉಲ್ಲೇಖ-2 ರಲ್ಲಿ ಸೂಚಿಸಿರುವಂತೆ ಏಜೆನ್ಸಿಯ ಮೂಲಕ ನೇಮಿಸಿಕೊಳ್ಳುವುದು.
- ಜಿಲ್ಲೆ ಮತ್ತು ತಾಲ್ಲೂಕು ಜೆಂಡರ್ ಸಂಯೋಜಕರ ಸೇವೆಯನ್ನು ಒದಗಿಸುತ್ತಿರುವ ಏಜೆನ್ಸಿಯ ಸೇವೆ ರದ್ದಾಗಿದ್ದಲ್ಲಿ ಅಥವಾ ತೃಪ್ತಿಕರವಾಗಿದ್ದಲ್ಲಿ ಅಥವಾ ಅವಧಿ ಮುಗಿದು ಟೆಂಡರ್ ನಿಯಮದಂತೆ ನೂತನ ಏಜೆನ್ಸಿಯ ಆಯ್ಕೆ ಮಾಡಬೇಕಿದ್ದಲ್ಲಿ ನೂತನ ಏಜೆನ್ಸಿಯನ್ನು ಆಯ್ಕೆ ಮಾಡಿ, ಜಿಲ್ಲಾ ಮತ್ತು ತಾಲ್ಲೂಕು ಜೆಂಡರ್ ಸಂಯೋಜಕರ ಸೇವೆಯನ್ನು ಆಯ್ಕೆಯಾದ ನೂತನ ಏಜೆನ್ಸಿಯಡಿ ತರುವುದು. ನೂತನ ಏಜೆನ್ಸಿಯ ಆಯ್ಕೆಯನ್ನು ಸರ್ವ ಶಿಕ್ಷಣ ಅಭಿಯಾನದ ಖರೀದಿ ನಿಯಮಗಳಂತೆ ಕೈಗೊಳ್ಳುವುದು.
- ಜಿಲ್ಲಾ ಜೆಂಡರ್ ಸಂಯೋಜಕರಿಗೆ ರೂ 8000/-, ತಾಲ್ಲೂಕು ಜೆಂಡರ್ ಸಂಯೋಜಕರಿಗೆ ರೂ 6000/- ಗೌರವಧನವನ್ನು ನೀಡುವುದು. ಕ್ಲಸ್ಟರ್ ಜೆಂಡರ್ ಸಂಯೋಜಕರಿಗೆ ಕೆಲಸ ನಿರ್ವಹಿಸಿದ ದಿನಗಳಿಗೆ ಪ್ರತಿ ದಿನಕ್ಕೆ ರೂ 66/- ರಂತೆ ಗೌರವಧನ ನೀಡುವುದು ಟಿ.ಎ/ಡಿ.ಎ ಯನ್ನು ಕೆ.ಸಿ.ಎಸ್.ಆರ್ ನಿಯಮಾನುಸಾರ ನೀಡುವುದು.

➢ ಮೇಲೆ ಸೂಚಿಸಿದ ಅಂಶಗಳ ಆಧಾರದ ಮೇಲೆ ಜಿಲ್ಲಾ ಮತ್ತು ತಾಲ್ಲೂಕು ಜೆಂಡರ್ ಸಮನ್ವಯಾಧಿಕಾರಿಗಳ ಮುಂದುವರಿಕೆ, ನೇಮಕ ಪ್ರಕ್ರಿಯೆ ಕುರಿತ ನಿರ್ಧಾರವನ್ನು ಜಿಲ್ಲಾ ಹಂತದಲ್ಲಿ ಕೈಗೊಳ್ಳುವುದು.

ಜಿಲ್ಲಾ ಮತ್ತು ತಾಲ್ಲೂಕು ಜೆಂಡರ್ ಸಂಯೋಜಕರುಗಳ ಮುಂದುವರಿಕೆ/ನೇಮಕ/ಗೌರವಧನ/ಟಿ.ಎ.,ಡಿ.ಎ ಪಾವತಿಗಳಿಗೆ ಸಂಬಂಧಿಸಿದಂತೆ ಯಾವುದೇ ದೂರುಗಳು ಬರದಂತೆ ಎಚ್ಚರವಹಿಸುವುದು ಹಾಗೂ ಈ ಸುತ್ತೋಲೆ ಮೂಲಕ ಸ್ಪಷ್ಟೀಕರಣ ನೀಡಿರುವ ಅಂಶಗಳಿಗೆ ಸಂಬಂಧಿಸಿದಂತೆ ಯಾವುದೇ ಮನವಿಗಳನ್ನು 2010–11 ನೇ ಸಾಲಿನಲ್ಲಿ ಈ ಕಛೇರಿಗೆ ಮಾರ್ಗದರ್ಶನಕ್ಕಾಗಿ ಕಳುಹಿಸಬಾರದೆಂದು ಈ ಮೂಲಕ ಸೂಚಿಸಿದೆ.

(ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ
ಆದೇಶಾನುಸಾರ)

ನಿರ್ದೇಶಕರು (ಕಾರ್ಯಕ್ರಮಗಳು) ಪರವಾಗಿ
ಸರ್ವ ಶಿಕ್ಷಣ ಅಭಿಯಾನ

**ಮಾಹಿತಿಗಾಗಿ**

1. ಮಾನ್ಯ ಆಯುಕ್ತರು, ಸಾ.ಶಿ.ಇ., ಬೆಂಗಳೂರು ರವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆಗೆ ಕಳುಹಿಸುತ್ತಾ ಮಾನ್ಯರ ಅವಗಾಹನೆಗೆ ತರಲು ಕೋರಿದೆ.
3. ಮಾನ್ಯ ಅಪರ ಆಯುಕ್ತರು, ಸಾ.ಶಿ.ಇ., ಗುಲ್ಬರ್ಗಾ ಮತ್ತು ಧಾರವಾಡ ರವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.

**ಮುಂದಿನ ಕ್ರಮಕ್ಕಾಗಿ**

1. ಸಂಬಂಧಿಸಿದ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ), ಡಿವೈಪಿಸಿ ಗಳಿಗೆ
2. ಸಂಬಂಧಿಸಿದ ತಾಲ್ಲೂಕುಗಳ ಬಿ.ಇ.ಓ ಮತ್ತು ಬಿ.ಆರ್.ಸಿ ಗಳಿಗೆ